## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

**ದಿನಾಂಕ 18ನೇ ಫೆಬ್ರವರಿ 2021.**

**ಸಿ.ಸಿ.ಸಂಖ್ಯೆಃ314/2018**

**ಫಿರ್ಯಾದಿಃ** **ಆರೋಪಿಃ**

**ಗುಬ್ಬಿ ಪೊಲೀಸ್** **ವಿರುದ್ಧ** **ನೌಷದ್‌ಪಾಷ**

## ದೋಷಾರೋಪಣೆ

ನಾನು, ಶ್ರೀಮತಿ. ಫೈರೋಜಾ ಹೆಚ್.ಉಕ್ಕಲಿ, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಗುಬ್ಬಿ,

**ಆರೋಪಿಃ** ನೌಷದ್‌ಪಾಷ ಬಿನ್ ಅನೀಫ್, 29 ವರ್ಷ,
ವಾಸಃ ಮಡಿಕೇಹಳ್ಳಿ ಗ್ರಾಮ, ಕೊತ್ತಗೆರೆ ಹೋಬಳಿ,
ಕುಣಿಗಲ್ ತಾಲ್ಲೂಕು, ತುಮಕೂರು.

ನಿನ್ನ ಮೇಲೆ ಹೊರಿಸುವ ಆಪಾದನೆ ಏನೆಂದರೆಃ-

ದಿಃ20.02.2018 ರಂದು ಬೆಳಗ್ಗೆ 9.00 ಗಂಟೆ ಸಮಯದಲ್ಲಿ ಗುಬ್ಬಿ ಟೌನಿನ ಸಾಕ್ಷಿ 8 ರವರ ಎಸ್.ಎಲ್.ವಿ.ಕಂಫರ್ಟ್ ಲಾಡ್ಜ್‌ನಲ್ಲಿ ಉಳಿದುಕೊಳ್ಳಲು ಬರುತ್ತಿದ್ದ ಆರೋಪಿಯಾದ ನೀನು ಅವರ ಬಳಿ ಇದ್ದ ಕೆಎ-20-ಎಂಬಿ-1830 ಸಂಖ್ಯೆಯ ಮಾರುತಿ ರಿಡ್ಜ್ ಕಾರಿನ ಬಗ್ಗೆ ಹಾಗೂ ಕಾರಿನ ಸಿಸ್ಟಮ್ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಅವರ ವಿಶ್ವಾಸವನ್ನು ಗಳಿಸಿಕೊಂಡು ಕಾರು ಇಷ್ಟವಾಗಿದೆಯೆಂದು ತಿಳಿಸಿ, ಟೆಸ್ಟ್ ಡ್ರೈವ್ ಮಾಡುವುದಾಗಿ ಹೇಳಿ ಸಾಕ್ಷಿ 8 ರವರಿಂದ ಕಾರಿನ ಕೀಯನ್ನು ಪಡೆದುಕೊಂಡು ಕಾರನ್ನು ತೆಗೆದುಕೊಂಡು ಹೋದ ನೀನು ವಾಪಸ್ಸು ಕಾರನ್ನು ಕೊಡದೇ ವಂಚಿಸಿ ನಂಬಿಕೆ ದ್ರೋಹವನ್ನುಂಟು ಮಾಡಿದ್ದರಿಂದ ಭಾರತ ದಂಡ

ಸಂಹಿತೆ ಕಲಂ.417, 420 ರ ರೀತ್ಯಾ ಶಿಕ್ಷಾರ್ಹ ಅಪರಾಧ ಮಾಡಿರುವುದಾಗಿ ದೋಷಾರೋಪಿಸಲಾಗಿದೆ.

(ಮೇಲಿನ ಆಪಾದನೆಯನ್ನು ನೀನು ನನ್ನ ಸಂಜ್ಞಾನದಲ್ಲಿ ಮಾಡಿದ್ದು ಆದರಿಂದಾಗಿ ನನ್ನ ಸಮಕ್ಷಮ ವಿಚಾರಣೆಗೆ ಗುರಿಯಾಗಬೇಕೆಂದು ನಿರ್ದೇಶಿಸುತ್ತಿದ್ದೇನೆ.)

(ಮೇಲಿನ ಆಪಾದನೆಯನ್ನು ಆರೋಪಿಗೆ ವಿ.ಸಿ. ಮುಖಾಂತರ ಓದಿ ಹೇಳಲಾಯಿತು ಅವರು ಕೊಟ್ಟ ಉತ್ತರಗಳನ್ನು ಅದೇ ರೀತಿ ದಾಖಲು ಮಾಡಿಕೊಳ್ಳಲಾಯಿತು ಎಂದು ಈ ಮೂಲಕ ದೃಢೀಕರಿಸಿದೆ)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಗುಬ್ಬಿ.